ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

---

# ಪ್ರಕಟಣೆಗಾಗಿ

ಸುತ್ತೂರು ಶ್ರೀಕ್ಷೇತ್ರದಲ್ಲಿ ಗ್ರಾಮೀಣ ಯುವಜನರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರವು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಹಾಗೂ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ನಡೆಯುತ್ತಿದೆ.

'ಧರ್ಮ-ವೈಚಾರಿಕತೆ' ಕುರಿತು ಉಪನ್ಯಾಸ ನೀಡಿದ ಡಾ. ಶರತ್‌ಚಂದ್ರ ಸ್ವಾಮೀಜಿ, ವೈಚಾರಿಕತೆ ಧರ್ಮಗಳ ತಳಹದಿಯಾಗಿ ಸಾಗಿದಾಗ ಮೌಲ್ಯಯುತ ಬದುಕು ಸಾಧ್ಯ. ಶರಣರು, ವಚನಕಾರರು, ವೈಚಾರಿಕತೆ ಒರೆಗಲ್ಲಿಗೆ ಜೀವನವನ್ನು ಒಳಪಡಿಸಿ ಮೌಲ್ಯಯುತ ಬದುಕಿಗೆ ನೆರವು ನೀಡಿದರು. ಇಂದಿನ ಜಗತ್ತು ಧರ್ಮ ವೈಚಾರಿಕತೆಯ ಮೇಲೆ ನಿಲ್ಲಬೇಕೆ ಹೊರತು ಸನಾತನ ಮತ್ತು ಮೌಢ್ಯಗಳ ಆಚರಣೆಯಲ್ಲ ಎಂದು ತಿಳಿಸುತ್ತಾ, ಮಾನವನಿಗೆ ಕಾಡಿದ ಮೂರು ಪ್ರಶ್ನೆಗಳು, ನಾನಾರು? ಎಲ್ಲಿಂದ ಬಂದೆ? ಇಲ್ಲಿಗೇಕೆ ಬಂದೆ? ಈ ವಿಚಾರವಾಗಿ ನಾಲ್ಕು ವಿಧದ ಜನರು ಹೋರಾಟ ಮಾಡುತ್ತಾರೆ, ಅವರೆಂದರೆ ವಿಜ್ಞಾನಿ, ಮನೋವಿಜ್ಞಾನಿ, ನಾಸ್ತಿಕ ವಿಚಾರವಾದಿ ಮತ್ತು ಧಾರ್ಮಿಕರು, ಈ ಪ್ರಶ್ನೆಗಳಿಗೆ ಬಹುತೇಕ ಉತ್ತರವನ್ನು ಕಂಡುಕೊಂಡವರು ಧಾರ್ಮಿಕರು ಎಂದು ತಿಳಿಸಿದರು.

ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಪ್ರವಚನ ನೀಡುತ್ತಾ 'ನಾನೇನು ಬಡವನಲ್ಲ ನನಗಿಂತ ಶ್ರೀಮಂತನಿಲ್ಲ' ಎನ್ನುವ ಉಕ್ತಿಯಂತೆ ಶರಣ ಮುದ್ದಣ ಹೇಳುವಂತೆ ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ ವಿಶ್ವಾಸವೆಂಬ ಬಿತ್ತ ಬಲಿತು, ಉಂಡು ಸುಖಿಯಾಗಿರಬೇಕೆಂದು. ನಮ್ಮ ಕಾಮ, ಭೀಮ ದನದ ಒಡೆಯನೆ ನಮ್ಮ ದೇವರು ಎಂದು ಜೀವ ಜಗತ್ತಿನ ಒಡೆಯ ನಿಸರ್ಗ ದೇವನನ್ನು ಮನಸ್ಸಿಗೆ ಹೋಲಿಸಿದ್ದಾರೆ.

ನಮ್ಮ ಮನಸ್ಸಿನ ಭೂಮಿ, ಹದಗೊಳಿಸಿ ಉತ್ತಮ ಬೀಜ ಬಿತ್ತಿ ಒಕ್ಕಲುತನ ಮಾಡಿದರೆ ಅಂತರಂಗ ಸ್ವಚ್ಛಗೊಳ್ಳುವುದು, ಅಂತರಂಗ ಸ್ವಚ್ಛಗೊಳಿಸುವುದು, ಅಸೂಯೆ, ಅಹಂಕಾರ ದ್ವೇಷಗಳಿಂದ ಭೂಮಿಯನ್ನು ಕೆಡಿಸಬಾರದು ಇದನ್ನು ಸ್ವಚ್ಛಗೊಳಿಸುವುದು, ಅತಿಯಾಸೆ ಮಾಡದೆ ಅಂತರಂಗ ಪಡೆಯಲು ನಮ್ಮ ಮನಸ್ಸು ಹದಗೊಳಿಸಬೇಕು. ಅಂತರಂಗದ ಭೂಮಿಯ ಮಾಲಿಕರೆ ನಾವು. ಹೀಗಾಗಿ, ಎಲ್ಲರು ಕೃಷಿಕರು, ಜ್ಞಾನ, ಶಾಂತಿ, ಬೆಳೆ ಬೆಳೆಯಲು ಭೂಮಿ ಹದಗೊಳಿಸಬೇಕು ಆಗ ವಿಶ್ವಾಸ ಶ್ರದ್ಧೆ ಎಂಬ ಬೆಳೆ ಬೆಳೆಯುವುದು. ವಿಶ್ವಾಸ ಇದ್ದರೆ ಜೀವನ ಶ್ರದ್ಧೆ ಅಲುಗಾಡಬಾರದು ಕೃಷಿಕ ಶ್ರದ್ಧೆಯಿಂದ ಒಕ್ಕಲುತನ ಮಾಡುತ್ತಾನೆ, ತಾನು ಬಿತ್ತಿದ ಬೀಜ ಮೊಳಕೆಯೊಡೆಯುವ ಭರವಸೆಯಿಂದ ಭೂಮಿ ಮೇಲೆ ವಿಶ್ವಾಸ ತಳೆಯುತ್ತಾನೆ. ತನ್ನ ಸಾಮರ್ಥ್ಯದ ಮೇಲೆ ವಿಶ್ವಾಸವಿರಬೇಕು. ಇಲ್ಲದಿದ್ದರೆ ಸಂದೇಹ, ಭಯ, ದುಃಖ ಹುಟ್ಟಿಸುತ್ತದೆ, ವಿಶ್ವಾಸದ ದೀಪ ಉರಿಯುವವರೆಗೆ ಮನೆ ಶಾಂತವಾಗಿರುತ್ತದೆ ಎಂದು ತಿಳಿಸಿದರು.

'ಬದುಕಿನಲ್ಲಿ ಹಾಸ್ಯ' ಕುರಿತು ಉಪನ್ಯಾಸ ನೀಡಿದ ಶ್ರೀ ಶಿವಶಂಕರ ಬೆಳ್ಳಿಯಪ್ಪನವರು, ಜಂಜಾಟದ ಬದುಕಿನಲ್ಲಿ ಒಂದಿಷ್ಟು ಹಾಸ್ಯ ಪ್ರಜ್ಞೆ, ನಗು ಇದ್ದರೆ ಮಾತ್ರ ಜೀವನ ಮುನ್ನಡೆಸಲು ಸಾಧ್ಯ. ಪ್ರತಿನಿತ್ಯದ ಬದುಕಿನಲ್ಲಿ ಹಾಸ್ಯ ಅಡಗಿರುತ್ತದೆ. ಅದನ್ನು ತಿಳಿದುಕೊಂಡು ಆಸ್ವಾದಿಸುವ ಗುಣವನ್ನು ಎಲ್ಲರು ಕಲಿಯಬೇಕು, ಹಾಸ್ಯವಿಲ್ಲದ ಜೀವನ ವ್ಯರ್ಥ, ಒಬ್ಬ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಹಾಸ್ಯ ಅತಿ ಮುಖ್ಯ, ಮನುಕುಲಕ್ಕೆ ದೊರಕಿರುವ ಅತ್ಯಂತ ಶ್ರೇಷ್ಠ ಆಶೀರ್ವಾದವೆಂದರೆ ಹಾಸ್ಯ ಎಂದು ಹಾಸ್ಯದ ನಗೆಗಡಲನ್ನು ಬೀರಿದರು.

ಬೆಳಗಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಶಿಬಿರವು ಶಿಬಿರಾರ್ಥಿಗಳ ಆರೋಗ್ಯ ವರ್ಧನೆಗೆ ಯೋಗ ಕಾರ್ಯಕ್ರಮ ಆಯೋಜಿಸಿದ್ದು, ತುಂಬಾ ಉಪಯುಕ್ತವಾಗಿದೆ ಹಾಗೂ ಪಾರಂಪರಿಕ ಆಟಗಳ ಮಹತ್ವ ತಿಳಿಸುವ ಸಲುವಾಗಿ ದೇಸಿಯ ಆಟಗಳನ್ನು ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ ಶಿಬಿರಾರ್ಥಿಗಳು ಬಹಳ ಉತ್ಸಾಹದಿಂದ ಭಾಗವಹಿಸಿದ್ದರು. ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದರು.




**ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಆಯೋಜಿಸಿರುವ ಗ್ರಾಮೀಣ ಯುವಜನರ ಶಿಬಿರದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಪ್ರವಚನ ನೀಡಿದರು.**